Ref.No.54/2020

WW-1,

ದಿನಾಂಕಃ 01-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ.ಪಿ. ವಕೀಲರಿಂದ

ನನ್ನ ಜೊತೆ ಕೆಲಸ ಮಾಡುತ್ತಿದ್ದ ಆನಂದ ಬಿ ಎಂ , ನಾಗೇಂದ್ರ ಸಿ.ಎಂ. ರವಿಕುಮಾರ ಎಸ್, ವೆಂಕಟೇಶ ಕೆ ಸಿ. ದಿನೇಶ ಜಿ, ಸಂತೋಷ್ ಕುಮಾರ್ ಬಿ ಎನ್ , ನವೀನ್.ಜಿ. ಚಂದ್ರಶೇಖರ್.ಎಸ್. ನಾಗೇಂದ್ರ ಎನ್. ಮತ್ತು ಸಾಗರ್ ಎನ್ ಜೆ ರವರುಗಳನ್ನು ವಿಚಾರಣೆ ಮಾಡಿ ಕೆಲಸದಿಂದ ತೆಗೆದುಹಾಕಿದ್ದಾರೆ ಎಂದರೆ ನಿಜ. ಅವರೆಲ್ಲರೂ ಈಗ ಎಲ್ಲಿದ್ದಾರೆ ಮತ್ತು ಏನು ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಸಾಮಾನ್ಯವಾಗಿ ನೌಕರರು ಸಂಬಳ ಜಾಸ್ತಿ ಮಾಡಿ ಎಂದು ಕೇಳಿದಾಗ ಆಡಳಿತ ವರ್ಗದವರು ಜಾಸ್ತಿ ಮಾಡುತ್ತಾರೆ ಅಥವಾ ನೌಕರರ ಸಂಘದವರು ಸಂಬಳವನ್ನು ಜಾಸ್ತಿ ಮಾಡಿ ಎಂದು ಕೇಳಿದಾಗ ಕೂಡ ಜಾಸ್ತಿ ಮಾಡುತ್ತಾರೆ ಎಂಬುದು ನಿಜ. ಕಾರ್ಮಿಕ ಸಂಘದವರು ಸಂಬಳ ಜಾಸ್ತಿ ಮಾಡಿ ಎಂದು ಬೇಡಿಕೆ ಪಟ್ಟಿಕೆಯನ್ನು ಸಲ್ಲಿಸಿದ ನಂತರ ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದವರು ಮಾತುಕತೆ ಮಾಡಿ ತೀರ್ಮಾನ ತೆಗೆದುಕೊಳ್ಳುವ ಪರಿಪಾಠವಿದೆ ಎಂದರೆ ನಿಜ. ಈ ರೀತಿಯಲ್ಲಿ ಒಪ್ಪಂದ ಮಾಡಿಕೊಂಡಾಗ ಅದು ಕಾರ್ಮಿಕ ಸಂಘದಲ್ಲಿರುವ ಎಲ್ಲಾ ಸದಸ್ಯರಿಗೆ ಅನ್ವಯಿಸುತ್ತದೆ ಎಂದರೆ ನಿಜ. ಕಾರ್ಮಿಕ ಸಂಘದಲ್ಲಿ ಸದಸ್ಯರಾಗಿರುವ ಎಲ್ಲರಿಗೂ ಅವರ ಕೆಲಸದ ಪರ್ಫಾರ್ಮೆನ್ಸ ಹೇಗಿದ್ದರೂ ಕೂಡ ಲಾಭ ಬರುತ್ತದೆ ಎಂದರೆ ನಿಜ. ಸಾಮಾನ್ಯವಾಗಿ ಯಾರು ಈ ಸೆಟ್ಲಮೆಂಟ್ ವ್ಯಾಪ್ತಿಯೊಳಗೆ ಬರುವುದಿಲ್ಲವೋ ಅವರ ಬಗ್ಗೆ ಆಡಳಿತ ವರ್ಗದವರು ಪ್ರತ್ಯೇಕವಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ದಿನಾಂಕಃ12-2-2018 ರಂದು ನಾವು ಆಡಳಿತ ವರ್ಗಕ್ಕೆ ನೀಡಿದ ಬೇಡಿಕೆ ಪಟ್ಟಿಯಲ್ಲಿ ಒಟ್ಟು 31 ಬೇಡಿಕೆಗಳು ಇದ್ದವು ಎಂದರೆ ನಿಜ. ನಮ್ಮ ಕಾರ್ಮಿಕ ಸಂಘದ ವಕೀಲರು ಸದರಿ ಬೇಡಿಕೆಗಳನ್ನು ತಯಾರಿಸಿದ್ದರು. ನಾವು ಚರ್ಚಿಸಿ ತೀರ್ಮಾನ ಕೈಗೊಂಡ ವಕೀಲರು ಅರ್ಜಿದಾರ ಸಂಸ್ಥೆಯ ಕೆಲಸಗಾರರಾಗಿರಲಿಲ್ಲ. ನಮ್ಮ ವಕೀಲರಿಗೆ ನಮ್ಮ ಸಂಸ್ಥೆಯ ಸಂಪೂರ್ಣ ಅರಿವು ಇರಲಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಇತ್ತು ಮತ್ತು ಉಳಿದ ಮಾಹಿತಿಯನ್ನು ನಾವು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ಬಗ್ಗೆ ವಕೀಲರಿಗೆ ಪೂರ್ಣ ಮಾಹಿತಿ ಇರಲಿಲ್ಲ ಎಂದರೆ ನಿಜ. ನಾವು ಬೇಡಿಕೆ ಪಟ್ಟಿ ಸಲ್ಲಿಸುವ 1 ವರ್ಷ ಮುಂಚಿನಿಂದಲೇ ಪ್ಯಾಟ್ರಿಕ್ ಎಂಬ ವಕೀಲರು ನಮ್ಮ ಸಂಪರ್ಕದಲ್ಲಿದ್ದರು. ಅವರಿಗಿಂತ ಮುಂಚೆ ಹೆಚ್ ಆರ್ ಶೇಷಾದ್ರಿ ಎನ್ನುವರು ನಮ್ಮ ಕಾನೂನು ಸಲಹೆಗಾರರು ಆಗಿದ್ದರು ಎಂದರೆ ನಿಜ. ಅವರ ನಂತರ ಪ್ಯಾಟ್ರಿಕ್ ರವರನ್ನು ನಮ್ಮ ಕಾನೂನು ಸಲಹೆಗಾರರನ್ನಾಗಿ ಸ್ವೀಕರಿಸಿದೆವು ಎಂದರೆ ನಿಜ. ಯಾವ ಕಾರಣಕ್ಕಾಗಿ ನಮ್ಮ ಕಾನೂನು ಸಲಹೆಗಾರರನ್ನು ಬದಲಾಯಿಸಿದೆವು ಎಂದು ಹೇಳಲಾಗುವುದಿಲ್ಲ. ನಿಶಾನೆ ಡಬ್ಲೂ-9 ದಾಖಲೆಯನ್ನು ಆಡಳಿತ ವರ್ಗಕ್ಕೆ ನಾನು ಸಹಿ ಮಾಡಿ ಕೊಟ್ಟಿದ್ದೇನೆ ಎಂದರೆ ನಿಜ. ಯಾವ

Ref.No.54/2020

WW-1,

ಕಾರಣಕ್ಕೋಸ್ಕರ ಈ ಪತ್ರವನ್ನು ಕೊಟ್ಟಿದ್ದೆ ಎಂದು ಹೇಳಬಹುದು. ದಿನಾಂಕಃ2-2-2018 ರಂದು ನಾನು ಕೊಟ್ಟಿರುವ ಪತ್ರವನ್ನು ಮುಂದುವರಿಸುವುದು ಬೇಡ ಎಂದು ದಿನಾಂಕಃ7-6-2018 ರಂದು ಕೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ದಿನಾಂಕಃ21-7-2018 ರಂದು ನಮ್ಮ ಸಂಸ್ಥೆಯಲ್ಲಿ 10 ನೇ ವರ್ಷದ ವಾರ್ಷಿಕೋತ್ಸವ ನಡೆಯಿತು ಸದರಿ ಕಾರ್ಯಕ್ರಮಕ್ಕೆ ನನ್ನ ಮುಂಚಿನ ಕಾನೂನು ಸಲಹೆಗಾರರಾದ ಹೆಚ್ ಆರ್ ಶೇಷಾದ್ರಿ ಯವರು ಬಂದಿದ್ದರು ಎಂದರೆ ಗೊತ್ತಿಲ್ಲ. ಅವರು ಬಂದಿದ್ದರು ಎಂಬ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೇಡಿಕೆ ಇಟ್ಟಿದ್ದ 31 ಬೇಡಿಕೆಗಳ ಪೈಕಿ ಕೆಲವೊಂದು ಬೇಡಿಕೆಗಳನ್ನು ಆಡಳಿತ ವರ್ಗದವರು ಪೂರೈಸಿದ್ದರು ಕೆಲವನ್ನು ಪೂರೈಸಿರಲಿಲ್ಲ. ಯಾವ ಬೇಡಿಕೆಯನ್ನು ಪೂರೈಸಿದ್ದರು ಮತ್ತು ಯಾವ ಬೇಡಿಕೆಯನ್ನು ಪೂರೈಸಿರಲಿಲ್ಲ ಎಂಬುದನ್ನು ದಾಖಲೆ ನೋಡಿ ಹೇಳಬೇಕಾಗುತ್ತದೆ. ಈಗ ನನಗೆ ತೋರಿಸಲಾಗುತ್ತಿರುವ ನಿಶಾನೆ ಡಬ್ಲ್ಯೂ-1 ದಾಖಲೆಯ ಪ್ರಕಾರ 3 ನೇ ಬೇಡಿಕೆ , 4 ನೇ ಬೇಡಿಕೆ , 8 ನೇ ಬೇಡಿಕೆ, 9 ನೇ ಬೇಡಿಕೆ , 10 ನೇ ಬೇಡಿಕೆ , 12 ನೇ ಬೇಡಿಕೆ , 13 ನೇ ಬೇಡಿಕೆ , 14 ನೇ ಬೇಡಿಕೆ , 15 ನೇ ಬೇಡಿಕೆ , 16 ನೇ ಬೇಡಿಕೆ , 17 ನೇ ಬೇಡಿಕೆ , 18 ನೇ ಬೇಡಿಕೆ , 19 ನೇ ಬೇಡಿಕೆ , 20 ನೇ ಬೇಡಿಕೆ , 21 ನೇ ಬೇಡಿಕೆ , 22 ನೇ ಬೇಡಿಕೆ , 23 ನೇ ಬೇಡಿಕೆ , 24 ನೇ ಬೇಡಿಕೆ , 25 ನೇ ಬೇಡಿಕೆ , 26 ನೇ ಬೇಡಿಕೆ , 27 ನೇ ಬೇಡಿಕೆ , 28 ನೇ ಬೇಡಿಕೆ , 29 ನೇ ಬೇಡಿಕೆ , 30 ನೇ ಬೇಡಿಕೆ ಮತ್ತು ಇತರ ಬೇಡಿಕೆಗಳನ್ನು ಪೂರೈಸಿರಲಿಲ್ಲ. ಆಡಳಿತ ವರ್ಗದವರು ಉಳಿದ ಬೇಡಿಕೆಗಳನ್ನು ನಮಗೆ ತೃಪ್ತಿಯಾಗುವಷ್ಟು ಪೂರೈಸಿರಲಿಲ್ಲ. ಸಾಮಾನ್ಯವಾಗಿ ಒಬ್ಬರಿಗೆ ತೃಪ್ತಿಯಾದಲ್ಲಿ ಇನ್ನೊಬ್ಬರಿಗೆ ತೃಪ್ತಿಯಾಗುವುದಿಲ್ಲ ಎಂಬುದು ನನಗೆ ಗೊತ್ತಿಲ್ಲ. 2 ನೇ ಪಾರ್ಟಿಯವರು ಹೆವಿ ಡೀಸಲ್ ಎಂಜಿನ್ಸಗಳನ್ನು ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಉತ್ಪಾದನೆ ಮಾಡುತ್ತಾರೆ ಎಂಬುದು ನಿಜ. ಈ ರೀತಿಯಲ್ಲಿ ಹೆವಿ ಡೀಸಲ್ ಎಂಜಿನ್ ಗಳನ್ನು ಉತ್ಪಾದನೆ ಮಾಡುವ ಬೇರೆ ಕಂಪನಿಗಳು ಮೈಸೂರಿನಲ್ಲಿ ಎಷ್ಟಿವೆ ಎಂಬುದು ನನಗೆ ಗೊತ್ತಿಲ್ಲ. 2 ನೇ ಪಾರ್ಟಿ ಕಂಪನಿಯು ಕನಿಷ್ಟ ವೇತನ ಕಾಯಿದೆಯನ್ವಯ ಎಂಜಿನಿಯರಿಂಗ್ ಇಂಡಸ್ಟ್ರಿ ಕೆಟಗರಿಯಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬೇರೆ ಕಂಪನಿಗಳಲ್ಲಿ ಇದೇ ತರಹದ ಕೆಲಸಗಳಿಗೆ ಎಷ್ಟೆಷ್ಟು ಸಂಬಳ ಕೊಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಬೇಡಿಕೆ ಪಟ್ಟಿಯನ್ನು ಸಲ್ಲಿಸುವ ಮುಂಚೆ ನೌಕರರನ್ನೆಲ್ಲಾ ಕರೆದು ಅವರೊಂದಿಗೆ ಚರ್ಚಿಸಿ ನಂತರ ಬೇಡಿಕೆ ಪಟ್ಟಿಯನ್ನು ಆಡಳಿತ ವರ್ಗಕ್ಕೆ ಕೊಟ್ಟಿದ್ದೆ. ನನ್ನ ಬೇಡಿಕೆ ಪಟ್ಟಿಯಲ್ಲಿ 1 ವರ್ಷಕ್ಕೆ ಒಪ್ಪಂದವನ್ನು ಕೇಳಿದ್ದರು. ವರ್ಷಕ್ಕೊಮ್ಮೆ ಇಂಕ್ರಿಮೆಂಟ್ ಕೊಡುವಂತೆ ಆ ಆಧಾರದಲ್ಲಿ ನಾನು ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದೆ. ಯಾವ ಆಧಾರದ ಮೇಲೆ 2 ನೇ ಬೇಡಿಕೆ ಉದ್ಭವವಾಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. 3 ನೇ ಬೇಡಿಕೆಯು ಸರಕಾರವು ಪ್ರತಿ ವರ್ಷ ನಿರ್ಧರಿಸುತ್ತದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪಾರ್ಟಿ ಕಂಪನಿಯಲ್ಲಿ ಒಟ್ಟು 4 ಶಿಫ್ಟ್‌ಗಳಲ್ಲಿ ಅಂದರೆ 1 ನೇ ಪಾಳಿ, 2 ನೇ ಪಾಳಿ, ರಾತ್ರಿ

Ref.No.54/2020
WW-1,

ಪಾಳಿ ಮತ್ತು ಸಾಮಾನ್ಯ ಪಾಳಿ ಗಳಲ್ಲಿ ಕೆಲಸ ಮಾಡುತ್ತಾರೆ ಎಂದರೆ ನಿಜ. ಪ್ರತಿ ಪಾಳಿಯಲ್ಲಿ 8 ಗಂಟೆ ಕೆಲಸದ ಅವಧಿ ಇರುತ್ತದೆ ಎಂದರೆ ಸಾಕ್ಷಿಯು ನಾನಿದ್ದಾಗ 9 ಗಂಟೆ ಕೆಲಸ ಮಾಡಿಸುತ್ತಿದ್ದರು ಎಂದು ನುಡಿಯುತ್ತಾರೆ. ಈ 8 ಗಂಟೆಗಳ ಅವಧಿಯಲ್ಲಿ ಕೇವಲ ಕೆಲಸವನ್ನು ಮಾತ್ರ ಮಾಡಿಸುತ್ತಿದ್ದರು ಟೀ ಮತ್ತು ಊಟದ ವಿರಾಮ ಒಳಗೊಂಡಿರಲಿಲ್ಲ. ನಮ್ಮ ಫ್ಯಾಕ್ಟರಿಯಲ್ಲಿ ಒಟ್ಟು 8 ಗಂಟೆ 20 ನಿಮಿಷದ ಅವಧಿಯಲ್ಲಿ 10 ನಿಮಿಷಗಳ 2 ಟೀ ಬ್ರೇಕ್ ಮತ್ತು 30 ನಿಮಿಷಗಳ ಲಂಚ್ ಬ್ರೇಕ್ ಇರುತ್ತಿತ್ತು ಎಂದರೆ ನಿಜ. ಆಡಳಿತ ವರ್ಗದವರು 3 ಲಕ್ಷಕ್ಕೆ ಇನ್ಸುರ್ಸೆ ಕೊಡುತ್ತಿದ್ದರು ಆದರೆ ನಾವು 5 ಲಕ್ಷ ರೂ ವಾರ್ಷಿಕವಾಗಿ ಕೇಳಿದ್ದೆವು ಎಂದರೆ ನಿಜ. ಅದು ಯಾವ ಆಧಾರದಲ್ಲಿ 5 ಲಕ್ಷ ಇನ್ಸುರೆನ್ಸ ಬೇಕೆಂದು ಕೇಳಿದ್ದೆವು ಎಂದು ಹೇಳಲು ಆಗುವುದಿಲ್ಲ. ಅದೇರೀತಿಯಲ್ಲಿ 6 ನೇ ಬೇಡಿಕೆಯಾದ ರೂ.6000-00 ವಾರ್ಷಿಕವಾಗಿ ಮೆಡಿಕಲ್ ಅಲೋವೆನ್ಸ ಯಾವ ಆಧಾರದಲ್ಲಿ ಕೇಳಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನಮ್ಮ ಸಂಸ್ಥೆಗೆ ಇ ಎಸ್ ಐ ಕಾಯಿದೆ ಕೆಲಸವರಿಗೆ ಅನ್ವಯಿಸುತ್ತದೆ ಕೆಲಸವರಿಗೆ ಅನ್ವಯಿಸುವುದಿಲ್ಲ. ನಮ್ಮ ಯೂನಿಯನ್ ಸದಸ್ಯರಲ್ಲಿ ಎಷ್ಟು ಸದಸ್ಯರಿಗೆ ಇ ಎಸ್ ಐ ಕಾಯಿದೆ ಅನ್ವಯಿಸುತ್ತಿತ್ತು ಮತ್ತು ಎಷ್ಟು ಸದಸ್ಯರಿಗೆ ಅನ್ವಯಿಸುತ್ತಿರಲಿಲ್ಲ ಅನ್ನುವುದನ್ನು ದಾಖಲೆ ನೋಡಿ ಹೇಳಬೇಕಾಗುತ್ತದೆ. 2 ನೇ ಪಾರ್ಟಿಯು ಫ್ಯಾಕ್ಟರೀಸ್ ಆ್ಯಕ್ಟ್ ಕೆಳಗಡೆ ನೊಂದಾಯಿಸಲ್ಪಟ್ಟಿದೆ ಎಂದರೆ ನಿಜ. ಸದರಿ ಫ್ಯಾಕ್ಟರೀಸ್ ಆ್ಯಕ್ಟ್ ನಲ್ಲಿ ರಜೆ , ಕೆಲಸದ ಅವಧಿ , ತೂಕ ಎತ್ತುವಿಕೆ ಇತ್ಯಾದಿ ನಿಬಂಧನೆಗಳು ಇವೆ ಎಂದರೆ ಗೊತ್ತಿಲ್ಲ. ಫ್ಯಾಕ್ಟರೀಸ್ ಕಾಯಿದೆ ಅನ್ವಯ ನೀಡಬೇಕಾದ ಸವಲತ್ತುಗಳನ್ನು ನಮ್ಮ ಕಂಪನಿಯವರು ನೀಡುತ್ತಿದ್ದರು ಎಂದರೆ ಆ ಕಾಯಿದೆಯ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 7 ನೇ ಬೇಡಿಕೆ ಪ್ರಕಾರ ನಾನು ಫ್ಯಾಕ್ಟರೀಸ್ ಕಾಯಿದೆಯಿಂದ ಜಾಸ್ತಿ ಕೇಳಿದ್ದೆ ಎಂದರೆ ನಿಜ. ಬೇರೆ ಫ್ಯಾಕ್ಟರಿಗಳಲ್ಲಿ ಜಾಸ್ತಿ ಕೊಡುತ್ತಿದ್ದರಿಂದ ಕಾರ್ಮಿಕರಿಗೆ ಅನುಕೂಲವಾಗಲಿ ಎಂದು ಜಾಸ್ತಿ ಕೇಳಿದ್ದೆವು. ಬೇರೆ ಫ್ಯಾಕ್ಟರಿಗಳು ಯಾವುದು ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಕಂಪನಿಯನ್ನು
ಹೋಲುವಂತಹ ಬೇರೆ ಯಾವುದೇ ಕಂಪನಿಯನ್ನು ನಾನು ಹೆಸರಿಸಿಲ್ಲ ಎಂದರೆ ನಿಜ. ಕಾನೂನಿನಲ್ಲಿ 2 ನೇ ಪಾಳಿಗೆ 50 ರೂ,3 ನೇ ಪಾಳಿಗೆ 75 ರೂ ಜಾಸ್ತಿ ನೀಡಬೇಕೆಂದು ಹೇಳಿಲ್ಲ ಎಂದರೆ ಆ ವಿಷಯ ನನಗೆ ಗೊತ್ತಿಲ್ಲ ಆದರೆ ಜಾಸ್ತಿ ಕೊಡಿ ಎಂದು ಕೇಳುತ್ತಿದ್ದೇವೆ. ಯಾವನೇ ಒಬ್ಬ ನೌಕರ ಕೆಲಸ ಒಪ್ಪಿಕೊಂಡ ನಂತರ ಯಾವುದೇ ಪಾಳಿಗಳಲ್ಲಿ ಕೆಲಸ ಮಾಡಲು ತಯಾರಿರಬೇಕು ಎಂದರೆ ನಿಜ. ಅದಕ್ಕೆ ಅನುಗುಣವಾಗಿ ಅವರಿಗೆ ಸಂಬಳ ಕೊಡುತ್ತಾರೆ ಎಂಬುದು ನಿಜ. ಅದೇರೀತಿಯಲ್ಲಿ 9 ಮತ್ತು 10 ನೇ ಬೇಡಿಕೆಯನ್ನು ಯಾವ ಆಧಾರದಲ್ಲಿ ಕೇಳಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಅದೇರೀತಿಯಲ್ಲಿ ಉಳಿದ ಬೇಡಿಕೆಗಳನ್ನು ಯಾವ ಆದಾರದಲ್ಲಿ ಕೇಳಿದ್ದೇನೆ ಎಂದು ಹೇಳಲಾಗುವುದಿಲ್ಲ. ನಾನು ಕೇಳಿರುವಂತಹ ಬೇಡಿಕೆಗಳು ಯಾವುದೇ ಕಾನೂನಿನನ್ವಯ ಸಿಗಬೇಕಾದ ಸೌಲಭ್ಯಗಳಲ್ಲ ಎಂದರೆ ನನಗೆ

Ref.No.54/2020

WW-1,

ಗೊತ್ತಿಲ್ಲ. 17 ನೇ ಬೇಡಿಕೆಯು ಫ್ಯಾಕ್ಟರಿ ಕಾಯಿದೆಯಡಿಯಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೇಳಿರುವಂತಹ ಕೆಲವು ಬೇಡಿಕೆಗಳು ಕಾಯಿದೆಗಳ ವ್ಯಾಪ್ತಿಯಲ್ಲಿ ಬರುತ್ತವೆ ಕೆಲವು ಬರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಬಡ್ತಿ ಕೊಡುವುದು ಆಡಳಿತ ವರ್ಗದವರ ಪರಾಮರ್ಶಕ್ಕೆ ಸಂಬಂಧಪಟ್ಟ ವಿಚಾರ ಎಂದರೆ ನಿಜ. ಆಡಳಿತ ವರ್ಗದವರು ಫ್ಯಾಕ್ಟರಿ ನಿಯಮದನ್ವಯ ಪೇ ಸ್ಲಿಪ್ಪನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ಆ ಪೇ ಸ್ಲಿಪ್ಪಲ್ಲಿ ಕೆಲವು ನ್ಯೂನತೆಗಳು ಇದ್ದವು ಎನ್ನುತ್ತಾರೆ. ನಾನು ಪೇ ಸ್ಲಿಪ್ಪನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಅದನ್ನು ನೋಡದೆ ಅದರಲ್ಲಿ ಏನು ನ್ಯೂನತೆ ಇದೆ ಎಂದು ಹೇಳಲು ಆಗುವುದಿಲ್ಲ. ಅದರಲ್ಲಿ ನ್ಯೂನತೆ ಇಲ್ಲ ಮತ್ತು ಕಾನೂನು ಪ್ರಕಾರ ಅದು ಸರಿಯಾಗಿದೆ ಎಂದರೆ ಸರಿಯಲ್ಲ. ನಮ್ಮ ಕಾರ್ಮಿಕ ಸಂಘಕ್ಕೆ ಆಡಳಿತ ವರ್ಗದವರು ಮಾನ್ಯತೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾವು ಪತ್ರ ಕೊಟಿದ್ದೆವು ಅದನ್ನು ತಿರಸ್ಕರಿಸಿದ್ದಾರೆ ಎನ್ನುತ್ತಾರೆ. ನಮ್ಮ ಸಂಘ ಸ್ಥಾಪಿಸಲು ಜಾಗ ಕೊಡಿ ಎಂದು ನಾವು ಇಟ್ಟಿರುವ ಬೇಡಿಕೆಯು ಸರಿ ಇಲ್ಲ ಎಂದರೆ ಸಾಕ್ಷಿಯು ನಾವು ಸಂಘವನ್ನು ಸ್ಥಾಪಿಸುತ್ತೇವೆಂದು ಜಾಗ ಕೊಡಿ ಎಂದು ಕೇಳಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಕೇಳಿರುವ ಬೇಡಿಕೆಗಳನ್ನು ಕಾನೂನು ವ್ಯಾಪ್ತಿಯಲ್ಲಿ ಕೇಳಲು ಬರುವುದಿಲ್ಲ ಆದ್ದರಿಂದ ಅದನ್ನು ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಆಡಳಿತ ವರ್ಗದವರು ಕಾನೂನು ಪ್ರಕಾರ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದಾರೆ ಮತ್ತು ನಾನು ಕೇಳಿರುವ ಬೇಡಿಕೆಗಳನ್ನು ಕಾನೂನು ವ್ಯಾಪ್ತಿಯಲ್ಲಿ ಈಡೇರಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.